<u>2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಲಯ , ದಾವಣಗೆರೆ.</u>

<u>Spl.C.485/2024</u>

| <u>ಫಿರ್ಯಾದಿದಾರರು</u> | <u>ವಿರುದ್ಧ</u> | <u>ಆರೋಪಿತರು</u> |
|---|---|---|
| ರಾಜ್ಯದ ಪರವಾಗಿ ನ್ಯಾಮತಿ ಪೊಲೀಸ್ ಠಾಣೆ, ನ್ಯಾಮತಿ | | ಎ1) ಸತೀಶ ಮತ್ತು ಇತರರು |

## <u>ದೋಷಾರೋಪಣೆ</u>

ನಾನು ಶ್ರೀ. ಪ್ರವೀಣ್ ಕುಮಾರ್.ಆರ್.ಎನ್., ಬಿ.ಕಾಂ. ಎಲ್.ಎಲ್.ಬಿ. 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ವಿಶೇಷ ನ್ಯಾಯಾಧೀಶರು , ದಾವಣಗೆರೆ :-

| | | |
|---|---|---|
| ಆರೋಪಿತರಾದ- | 1 | ಎ1) ಸತೀಶ ತಂದೆ ಶೇಖರಪ್ಪ, ವಯಸ್ಸು 46 ವರ್ಷ,<br>ಎ2) ಅಭಿ ಯಾನೆ ಅಭಿಶೇಕ್ ತಂದೆ ಸತೀಶ, ವಯಸ್ಸು 21 ವರ್ಷ,<br>ಎ3) ರಘು ಯಾನೆ ರಾಘವೇಂದ್ರ ತಂದೆ ಪರಮೇಶ್ವರಪ್ಪ, ವಯಸ್ಸು 36 ವರ್ಷ,<br>ಎ4) ಸೋಗಿಲು ಶೇಖರಪ್ಪ ಯಾನೆ ಶೇಖರಪ್ಪ ತಂದೆ ಲೇಟ್ ಬಸಪ್ಪ, ವಯಸ್ಸು 54 ವರ್ಷ,<br>ಎ5) ಅಪ್ಪಾಜಿ ಯಾನೆ ಕೊರಮ ತಂದೆ ಬಸಪ್ಪ ಯಾನೆ ಬಸವರಾಜಪ್ಪ, ವಯಸ್ಸು 27 ವರ್ಷ,<br>ಎ6) ಸಂದೀಪ ತಂದೆ ಬಸವರಾಜಪ್ಪ, ವಯಸ್ಸು 23 ವರ್ಷ,<br>ಎ7) ಅನಿಲ ಎಸ್.ಎ. ತಂದೆ ಆಂಜಿನಪ್ಪ, ವಯಸ್ಸು 28 ವರ್ಷ,<br>ಎ9) ಪಾಲಾಕ್ಷಿ ಯಾನೆ ಪಾಲಾಕ್ಷಪ್ಪ ತಂದೆ ನಾಗಪ್ಪ, ವಯಸ್ಸು 36 ವರ್ಷ,<br>ಎ10) ಗಣೇಶ ತಂದೆ ರಂಗಪ್ಪ, ವಯಸ್ಸು 54 ವರ್ಷ,<br>ಎ11) ಸುದೀಪ್ ತಂದೆ ಚಂದ್ರಶೇಖರಪ್ಪ, ವಯಸ್ಸು 21 ವರ್ಷ,<br>ಎ12) ಸಚಿನ್ ತಂದೆ ಕುಮಾರಪ್ಪ, ವಯಸ್ಸು 22 ವರ್ಷ,<br>ಎ13) ಆಂಜನೇಯ ತಂದೆ ಶೇಖರಪ್ಪ, ವಯಸ್ಸು 26 ವರ್ಷ,<br>ಎಲ್ಲರೂ ವಾಸಃ ಚಿ.ಕಡದಕಟ್ಟೆ ಗ್ರಾಮ, ನ್ಯಾಮತಿ ತಾಲ್ಲೂಕು, ದಾವಣಗೆರೆ ಜಿಲ್ಲೆ. |

ನಿಮ್ಮ ಮೇಲೆ ಈ ಕೆಳಕಂಡಂತೆ ಆರೋಪವಿಡುತ್ತೇನೆ.

1. ಮೊದಲನೇಯದಾಗಿ, ನ್ಯಾಮತಿ ತಾಲ್ಲೂಕು ಮರಿಗೊಂಡನಹಳ್ಳಿ ಗ್ರಾಮದ ಪಕ್ಕದಲ್ಲಿ ಹರಿಯುತ್ತಿರುವ ತುಂಗಾಭದ್ರಾ ನದಿಯಲ್ಲಿ ಶೇಖರಣೆಯಾಗುತ್ತಿದದ ಮರಳನ್ನು 1 ಮತ್ತು 2 ನೇ ಆರೋಪಿತರಾದ ನೀವು ಬಹಳ ದಿನಗಳಿಂದ ಅಕ್ರಮವಾಗಿ ಮರಳನ್ನು ಕಳ್ಳತನದಿಂದ ಸಾಗಿಸುತ್ತಿದ್ದು, ಈ ಅಕ್ರಮ ಮರಳು ಸಾಗಾಣಿಕೆಯ ವಿಚಾರವಾಗಿ ದಾವಣಗೆರೆಯ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಅಧಿಕಾರಿಯಾದ ಸಾಕ್ಷಿ-23 ರವರು ದಿಃ 09-09-2024, ದಿಃ 10-09-2024 ಮತ್ತು ದಿಃ 18-09-2024 ರಂದು ಬೆಳಿಗ್ಗೆ 11-00 ಗಂಟೆಗೆ ಅಕ್ರಮವಾಗಿ ಮರಳು ತೆಗೆಯುತ್ತಿದ್ದ ಮರಿಗೊಂಡನಹಳ್ಳಿ ಗ್ರಾಮದ ಪಕ್ಕದಲ್ಲಿ ಹರಿಯುತ್ತಿರುವ ತುಂಗಾ ಭದ್ರಾ ನದಿಯ ಸ್ಥಳಕ್ಕೆ ಭೇಟಿ ನೀಡಿದ್ದರು, ಸಾಕ್ಷಿ-23 ರವರು ವಮರಳು ತೆಗೆಯುವ ಸ್ಥಳಕ್ಕೆ ಬಂದು ಹೋದ ಮೇಲೆ ಈ ವಿಚಾರ ತಿಳಿದುಕೊಂಡು 1 ಮತ್ತು 2 ನೇ ಆರೋಪಿತರಾದ ನೀವು ತಮ್ಮ ಬೆಂಬಲಿಗರಾದ 3 ರಿಂದ 7, 9 ರಿಂದ 13 ಮತ್ತು ಕಾನೂನು ಸಂಘರ್ಷಕ್ಕೆ ಒಳಗಾದಬಾಲಕ ಕೌಶಿಕ್ ಎನ್ನುವವರನ್ನು ಕರೆದುಕೊಂಡು ಗಣಿ ಮತ್ತು ಭೂವಿಜ್ಞಾನ ಇಲಾಖೆ ಅಧಿಕಾರಿಗಳಿಗೆ ಮತ್ತು ಪೋಲೀಸ್ ಇಲಾಖೆಯವರಿಗೆ ಕೊಲೆಯಾದ ವ್ಯಕ್ತಿ ಶಿವರಾಜ ಮಾಹಿತಿ ನೀಡುತ್ತಿದ್ದಾನೆ, ಇವನನ್ನು ಬಿಟ್ಟರೆ ಬೇರೆ ಯಾರುಾ ನಮ್ಮಗಳ ಬಗ್ಗೆ ಮಾಹಿತಿ ನೀಡುವುದಿಲ್ಲ ಇವನನ್ನು ಕೊಲೆ ಮಾಡಬೇಕೆಂದು 1 ಮತ್ತು 2 ನೇ ಆರೋಪಿತರಾದ ನೀವು ನಿರ್ಧರಿಸಿಕೊಂಡು 3 ರಿಂದ 7, 9 ರಿಂದ 13 ಮತ್ತು ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕ ಕೌಶಿಕ್ ಇವರೆಲ್ಲರನ್ನು ಸೇರಿಸಿಕೊಂಡು ಆರೋಪಿತರಾದ ನೀವೆಲ್ಲರೂ ತಮ್ಮ ಗ್ರಾಮದಿಂದ ಕೆಎ-17-ಇಎಕ್ಸ್-9141 ನೇ ಪಲ್ಸರ್ ಮೋಟಾರ್ ಬೈಕ್, ಕೆಎ-17-ಹೆಚ್-9143 ನೇ ಸಿಟಿ-100 ಮೋಟಾರ್ ಸೈಕಲ್, ಕೆಎ-17-ಇಜೆ-9053 ನೇ ಹೀರೋ ಹೆಚ್ ಎಫ್ ಡಿಲಕ್ಸ್ ಮೋಟಾರ್ ಸೈಕಲ್, ಕೆಎ-17-9051 ನೇ ಹೀರೋ ಹೋಂಡಾ ಸ್ಪ್ಲೆಂಡರ್ ಪ್ಲಸ್ ಮೋಟಾರ್ ಸೈಕಲ್ ಅನ್ನು, ಕೆಎ-17-ಹೆಚ್‌ಜೆ-4544 ನೇ ಹೀರೋ ಹೋಂಡಾ ಸ್ಪ್ಲೆಂಡರ್ ಪ್ಲಸ್ ಮೋಟಾರ್ ಸೈಕಲ್ ಅನ್ನು, ಕೆಎ-17-ಹೆಚ್‌ಜೆ-4542 ಹೀರೋ ಸ್ಪ್ಲೆಂಡರ್ ಮೋಟಾರ್ ಸೈಕಲನ್ನು, ಕೆಎ-14-ಇಸಿ-7626 ನೇ ಬಜಾಜ್ ಡಿಸ್ಕವರಿ ಮೋಟಾರ್ ಸೈಕಲ್ ಗಳಲ್ಲಿ ದಿಃ 18-09-2024 ರಂದು ಮದ್ಯಾಹ್ನ 1-00 ಗಂಟೆಗೆ ಬಂದು 1 ನೇ ಆರೋಪಿಯ ತಂದೆಯಾದ ಶೇಖರಪ್ಪ ಎನ್ನುವವರಿಗೆ ಸೇರಿದ ಚಿ.ಕಡದಕಟ್ಟೆ - ಮರಿಗೊಂಡನಹಳ್ಳಿ ಗ್ರಾಮಗಳ ರಸ್ತೆಯಲ್ಲಿರುವ ಚಿ.ಕಡದಕಟ್ಟೆ ಗ್ರಾಮದ ಸ.ನಂ.108 ರ ಅಡಿಕೆ ಸಸಿಗಳಿರುವ ಜಮೀನಿನಲ್ಲಿ ಮೃತ ಶಿವರಾಜನನ್ನು ಕೊಲೆ ಮಾಡಲು ಸಂಚು ರೂಪಿಸಿಕೊಂಡು ಅಲ್ಲಿಂದ ಆರೋಪಿತರಾದ ನೀವು ಅಕ್ರಮ ಗುಂಪು ಕಟ್ಟಿಕೊಂಡು ಅದೇ ಮೋಟಾರ್ ಬೈಕುಗಳಲ್ಲಿ ಅದೇ ದಿನ ದಿಃ 18-09-2024 ರಂದು ಮದ್ಯಾಹ್ನ 1-30 ಗಂಟೆ ಸಮಯಕ್ಕೆ

ಆರೋಪಿತರಾದ ನೀವೆಲ್ಲರೂ ಸೇರಿಕೊಂಡು ಮರಿಗೊಂಡನಹಳ್ಳಿ ಗ್ರಾಮದ ಎ.ಕೆ.ಕಾಲೋನಿಗೆ ನುಗ್ಗಿದ್ದು, ಆ ಪ್ರಕಾರ ಕಲಂ 189(4) ರ ಭಾರತೀಯ ನ್ಯಾಯ ಸಂಹಿತೆ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರ.

2. ಎರಡನೇಯದಾಗಿ, ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವೆಲ್ಲರೂ ಅಕ್ರಮ ಗುಂಪು ಕಟ್ಟಿಕೊಂಡು ಬಂದಿದ್ದಲ್ಲದೇ, ದೊಂಬಿ ಮಾಡಿದ್ದು, ಆ ಪ್ರಕಾರ ಕಲಂ 191(2) ರ ಭಾರತೀಯ ನ್ಯಾಯ ಸಂಹಿತೆ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರ.

3. ಮೂರನೇಯದಾಗಿ, ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವೆಲ್ಲರೂ ಅಕ್ರಮ ಗುಂಪು ಕಟ್ಟಿಕೊಂಡು ಕೈಯಲ್ಲಿ ಮಾರಕಾಸ್ತ್ರಗಳನ್ನು ಹಿಡಿದುಕೊಂಡು ಬಂದು ದೊಂಬಿ ಮಾಡಿದ್ದು, ಆ ಪ್ರಕಾರ ಕಲಂ 191(3) ರ ಭಾರತೀಯ ನ್ಯಾಯ ಸಂಹಿತೆ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರ.

4. ನಾಲ್ಕನೇಯದಾಗಿ, ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವೆಲ್ಲರೂ ಅಕ್ರಮ ಗುಂಪು ಕಟ್ಟಿಕೊಂಡು ಕೈಯಲ್ಲಿ ಮಾರಕಾಸ್ತ್ರಗಳನ್ನು ಹಿಡಿದುಕೊಂಡು ಬಂದು ದೊಂಬಿ ಮಾಡಿದ್ದಲ್ಲದೇ, ಹೇ ಶಿವರಾಜ ಮಾದಿಗ ಸೂಳೇಮಗನೇ ಎಲ್ಲಿದ್ದೀಯಾ ಬಾರೋ ನಿನ್ನ ತಾಯಿ ನಾ ಹಡ ಎಂದು ಅವಾಚ್ಯ ಶಬ್ದಗಳಿಂದ ಬೈದಾಡುತ್ತಾ ಇರುವಾಗ ಮೃತ ಶಿವರಾಜನ ಹೆಂಡತಿಯಾದ ಸಾಕ್ಷಿ-1 ರವರು ಮನೆಯಿಂದ ಹೊರಗೆ ಬರುತ್ತಿದ್ದಂತೆಯೇ 1 ಮತ್ತು 2 ನೇ ಆರೋಪಿತರಾದ ನೀವು ಮೃತ ಶಿವರಾಜನ ಮನೆಯ ಒಳಗೆ ಅಕ್ರಮ ಪ್ರವೇಶ ಮಾಡಿ ಮನೆಯೊಳಗಿದ್ದ ಮೃತ ಶಿವರಾಜನನ್ನು ಎಳೆದು ಹೊರಗೆ ತಂದಾಗ ಆರೋಪಿತರಾದ ನೀವೆಲ್ಲರೂ ಮೃತ ಶಿವರಾಜನಿಗೆ ಕೈಕಾಲುಗಳಿಂದ ಮೈಕೈಗೆ ಹೊಡೆಯುತ್ತಿರುವಾಗ ಬಿಡಿಸಿಕೊಳ್ಳಲು ಹೋದ ಸಾಕ್ಷಿ-1 ರವರಿಗೆ ಆರೋಪಿತರಾದ ನೀವೆಲ್ಲರೂ ಹೇ ಮಾದಿಗ ಸೂಳೆ ಮುಂಡೆ, ನಿನ್ನ ತಾಯಿ ನಾ ಹಡ, ಕತ್ತೆ ಸೂಳೆಮುಂಡೆ ಎಂದು ಜಾತಿ ನಿಂದನೆ ಮಾಡಿ ಅವಾಚ್ಯ ಶಬ್ದಗಳಿಂದ ಬೈದು, ತನ್ಮೂಲಕ ಸಾರ್ವಜನಿಕ ಶಾಂತತ ಭಂಗವುಂಟು ಮಾಡುವಂತೆ ಪ್ರಚೋದಿಸಿದ್ದು, ಆ ಪ್ರಕಾರ ಕಲಂ 352 ಜೊತೆ 190 ರ ಭಾರತೀಯ ನ್ಯಾಯ ಸಂಹಿತೆ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರ.

5. ಐದನೇಯದಾಗಿ, ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವೆಲ್ಲರೂ ಅಕ್ರಮ ಗುಂಪು ಕಟ್ಟಿಕೊಂಡು ಬಂದು ದೊಂಬಿ ಮಾಡಿ, ಅವಾಚ್ಯ ಶಬ್ದಗಳಿಂದ ಬೈದಿದ್ದಲ್ಲದೇ, ಮೃತ ಶಿವರಾಜನ ಹೆಂಡತಿಯಾದ ಸಾಕ್ಷಿ-1 ರವರು

ಮನೆಯಿಂದ ಹೊರಗೆ ಬರುತ್ತಿದ್ದಂತೆಯೇ 1 ಮತ್ತು 2 ನೇ ಆರೋಪಿತರಾದ ನೀವು ಮೃತ ಶಿವರಾಜನ ಮನೆಯ ಒಳಗೆ ಅಕ್ರಮ ಪ್ರವೇಶ ಮಾಡಿದ್ದು, ಆ ಪ್ರಕಾರ ಕಲಂ 329(4) ಜೊತೆ 190 ರ ಭಾರತೀಯ ನ್ಯಾಯ ಸಂಹಿತೆ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರ.

6. ಆರನೇಯದಾಗಿ, ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವೆಲ್ಲರೂ ಅಕ್ರಮ ಗುಂಪು ಕಟ್ಟಿಕೊಂಡು ಬಂದು ದೊಂಬಿ ಮಾಡಿ, ಅವಾಚ್ಯ ಶಬ್ದಗಳಿಂದ ಬೈದಿದ್ದಲ್ಲದೇ, 1 ನೇ ಆರೋಪಿಯಾದ ನೀನು ಸಾಕ್ಷಿ-1 ರವರ ಮೈಮೇಲಿನ ಬಟ್ಟೆಯನ್ನು ಹಿಡಿದು ಎಳೆದಾಡಿ ಕೈಕಾಲುಗಳಿಂದ ಮೈಕೈಗೆ ಹೊಡೆದು ಒಳ ನೋವು ಉಂಟುಮಾಡಿ ಸಾರ್ವಜನಿಕ ಸ್ಥಳದಲ್ಲಿ ಅವಮಾನ ಮಾಡಿದ್ದು, ಆ ಪ್ರಕಾರ ಕಲಂ 76 ಜೊತೆ 190 ರ ಭಾರತೀಯ ನ್ಯಾಯ ಸಂಹಿತೆ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರ.

7. ಏಳನೇಯದಾಗಿ, ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವೆಲ್ಲರೂ ಅಕ್ರಮ ಗುಂಪು ಕಟ್ಟಿಕೊಂಡು ಬಂದು ದೊಂಬಿ ಮಾಡಿ, ಅವಾಚ್ಯ ಶಬ್ದಗಳಿಂದ ಬೈದಿದ್ದಲ್ಲದೇ, ಅಕ್ರಮ ಪ್ರವೇಶ ಮಾಡಿ ಅವಮಾನ ಪಡಿಸಿದ್ದಲ್ಲದೇ, 1 ನೇ ಆರೋಪಿಯಾದ ನೀನು ಸಾಕ್ಷಿ-1 ರವರ ಮೈಮೇಲಿನ ಬಟ್ಟೆಯನ್ನು ಹಿಡಿದು ಎಳೆದಾಡಿ ಕೈಕಾಲುಗಳಿಂದ ಮೈಕೈಗೆ ಹೊಡೆದು ಒಳ ನೋವು ಉಂಟುಮಾಡಿದ್ದು, 1 ಮತ್ತು 2 ನೇ ಆರೋಪಿತರಾದ ನೀವು ಮೃತ ಶಿವರಾಜನ ಮನೆಯ ಒಳಗೆ ಅಕ್ರಮ ಪ್ರವೇಶ ಮಾಡಿ ಮನೆಯೊಳಗಿದ್ದ ಮೃತ ಶಿವರಾಜನನ್ನು ಎಳೆದು ಹೊರಗೆ ತಂದಾಗ ಆರೋಪಿತರಾದ ನೀವೆಲ್ಲರೂ ಮೃತ ಶಿವರಾಜನಿಗೆ ಕೈಕಾಲುಗಳಿಂದ ಮೈಕೈಗೆ ಹೊಡೆದಿದ್ದು, ಆ ಪ್ರಕಾರ ಕಲಂ 115(2) ಜೊತೆ 190 ರ ಭಾರತೀಯ ನ್ಯಾಯ ಸಂಹಿತೆ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರ.

8. ಎಂಟನೇಯದಾಗಿ, ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವೆಲ್ಲರೂ ಅಕ್ರಮ ಗುಂಪು ಕಟ್ಟಿಕೊಂಡು ಬಂದು ದೊಂಬಿ ಮಾಡಿ, ಅವಾಚ್ಯ ಶಬ್ದಗಳಿಂದ ಬೈದು ಅವಮಾನ ಪಡಿಸಿದ್ದಲ್ಲದೇ, ಇಷ್ಟಕ್ಕೆ ಸುಮ್ಮನಿರದೇ ಆರೋಪಿತರಾದ ನೀವು ಮೃತ ಶಿವರಾಜನನ್ನು ಅವರ ಮನೆಯಿಂದ ಹೊಡೆಯುತ್ತಾ ಎಳೆದುಕೊಂಡು ಅದೇ ಗ್ರಾಮದ ದೊಡ್ಡ ಹಾಲಪ್ಪರ ಶಿವಕುಮಾರ ಎನ್ನುವವರ ಮನೆಯ ಪಕ್ಕದ ರಸ್ತೆಗೆ ಹೋಗಿ 1 ನೇ ಆರೋಪಿಯಾದ ನೀನು ಮೃತ ಶಿವರಾಜನನ್ನು ಬಿಗಿಯಾಗಿ ಹಿಡಿದುಕೊಂಡಾಗ 2 ನೇ ಆರೋಪಿಯಾದ ನೀನು ಶಿವರಾಜನಿಗೆ ಸಾಯಿಸಲೇಬೇಕೆಂಬ ಉದ್ದೇಶವನ್ನಿಗಟ್ಟುಕೊಂಡು ತನ್ನ

ಸೊಂಟದಲ್ಲಿದ್ದ ಚಾಕುವನ್ನು ತೆಗೆದವನೇ ಮೃತ ಶಿವರಾಜನ ಎದೆಯ ಎಡಭಾಗಕ್ಕೆ ಬಲವಾಗಿ ಚುಚ್ಚಿ ಚಾಕುವನ್ನು ಚುಚ್ಚಿ ಹೊರತೆಗೆದಿದ್ದು, ಮತ್ತೊಮ್ಮೆ 2 ನೇ ಆರೋಪಿಯಾದ ನೀನು ಚಾಕು ಹಾಕಲು ಹೋದಾಗ ಮೃತ ತನ್ನ ಎಡಕೈಯಿಂದ ಚಾಕು ಹಿಡಿದುಕೊಂಡಾಗ 1 ನೇ ಆರೋಪಿಯಾದ ನೀನು ಮೃತನ ಎಡಗೈ ತೋಳಿನ ಮೇಲೆ ಬಾಯಿಯಿಂದ ಕಚ್ಚಿ ಚಾಕುವನ್ನು ಬಿಡಿಸಿರುತ್ತಾನೆ, ಇದರಿಂದ ಮೃತನ ಎಡಗೈ ಮೇಲೆ ರಕ್ತಗಾಯವಾಗಿರುತ್ತದೆ. ಮೃತ ಶಿವರಾಜ ತೀವ್ರ ರಕ್ತ ಸ್ರಾವ ಆಗಿ ಕೆಳಗೆ ಬಿದ್ದಾಗ ಮೃತ ಶಿವರಾಜನಿಗೆ ಹೊಡೆಯುವುದನ್ನು ಬಿಡಿಸಲು ಹೋದ ಸಾಕ್ಷಿ-13 ರವರಿಗೆ 2 ನೇ ಆರೋಪಿಯಾದ ನೀನು ಅದೇ ಚಾಕುವಿನಿಂದ ಬೆನ್ನಿಗೆ ಚುಚ್ಚಿ ಕೊಲೆ ಮಾಡಲು ಪ್ರಯತ್ನಿಸಿ ಸಾಮಾನ್ಯ ಸ್ವರೂಪದ ರಕ್ತ ಗಾಯಪಡಿಸಿದ್ದು, ಆ ಪ್ರಕಾರ ಕಲಂ.118(1) ಜೊತೆ 190 ರ ಭಾರತೀಯ ನ್ಯಾಯ ಸಂಹಿತೆ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರ.

9. ಒಂಭತ್ತನೇಯದಾಗಿ, ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವೆಲ್ಲರೂ ಅಕ್ರಮ ಗುಂಪು ಕಟ್ಟಿಕೊಂಡು ಬಂದು ದೊಂಬಿ ಮಾಡಿ, ಅವಾಚ್ಯ ಶಬ್ದಗಳಿಂದ ಬೈದು ಅವಮಾನ ಪಡಿಸಿದ್ದಲ್ಲದೇ, ಇಷ್ಟಕ್ಕೆ ಸುಮ್ಮನಿರದೇ ಆರೋಪಿತರಾದ ನೀವು ಮೃತ ಶಿವರಾಜನನ್ನು ಅವರ ಮನೆಯಿಂದ ಹೊಡೆಯುತ್ತಾ ಎಳೆದುಕೊಂಡು ಅದೇ ಗ್ರಾಮದ ದೊಡ್ಡ ಹಾಲಪ್ಪರ ಶಿವಕುಮಾರ ಎನ್ನುವವರ ಮನೆಯ ಪಕ್ಕದ ರಸ್ತೆಗೆ ಹೋಗಿ 1 ನೇ ಆರೋಪಿಯಾದ ನೀನು ಮೃತ ಶಿವರಾಜನನ್ನು ಬಿಗಿಯಾಗಿ ಹಿಡಿದುಕೊಂಡಾಗ 2 ನೇ ಆರೋಪಿಯಾದ ನೀನು ಶಿವರಾಜನಿಗೆ ಸಾಯಿಸಲೇಬೇಕೆಂಬ ಉದ್ದೇಶವನ್ನಿಗಟ್ಟುಕೊಂಡು ತನ್ನ ಸೊಂಟದಲ್ಲಿದ್ದ ಚಾಕುವನ್ನು ತೆಗೆದವನೇ ಮೃತ ಶಿವರಾಜನ ಎದೆಯ ಎಡಭಾಗಕ್ಕೆ ಬಲವಾಗಿ ಚುಚ್ಚಿ ಚಾಕುವನ್ನು ಚುಚ್ಚಿ ಹೊರತೆಗೆದಿದ್ದು, ಮತ್ತೊಮ್ಮೆ 2 ನೇ ಆರೋಪಿಯಾದ ನೀನು ಚಾಕು ಹಾಕಲು ಹೋದಾಗ ಮೃತ ತನ್ನ ಎಡಕೈಯಿಂದ ಚಾಕು ಹಿಡಿದುಕೊಂಡಾಗ 1 ನೇ ಆರೋಪಿಯಾದ ನೀನು ಮೃತನ ಎಡಗೈ ತೋಳಿನ ಮೇಲೆ ಬಾಯಿಯಿಂದ ಕಚ್ಚಿ ಚಾಕುವನ್ನು ಬಿಡಿಸಿರುತ್ತಾನೆ, ಇದರಿಂದ ಮೃತನ ಎಡಗೈ ಮೇಲೆ ರಕ್ತಗಾಯವಾಗಿರುತ್ತದೆ. ಮೃತ ಶಿವರಾಜ ತೀವ್ರ ರಕ್ತ ಸ್ರಾವ ಆಗಿ ಕೆಳಗೆ ಬಿದ್ದಾಗ ಮೃತ ಶಿವರಾಜನಿಗೆ ಹೊಡೆಯುವುದನ್ನು ಬಿಡಿಸಲು ಹೋದ ಸಾಕ್ಷಿ-13 ರವರಿಗೆ 2 ನೇ ಆರೋಪಿಯಾದ ನೀನು ಅದೇ ಚಾಕುವಿನಿಂದ ಬೆನ್ನಿಗೆ ಚುಚ್ಚಿ ಕೊಲೆ ಮಾಡಲು ಪ್ರಯತ್ನಿಸಿ ಸಾಮಾನ್ಯ ಸ್ವರೂಪದ ರಕ್ತ ಗಾಯಪಡಿಸಿದ್ದು, ಒಂದಾನುವೇಳೆ ನೀವು ಚುಚ್ಚಲು ಪ್ರಯತ್ನಿಸಿದ್ದರಿಂದ ಸಾಕ್ಷಿ-13 ರವರು ತೀರಿಕೊಂಡಿದ್ದಲ್ಲಿ ಕೊಲೆ ಅಪರಾಧಕ್ಕೆ ಸಂಬಂಧಿಸಿ ಎಷ್ಟು ಪ್ರಮಾಣದ ಶಿಕ್ಷೆಗೆ ಗುರಿಯಾಗುತ್ತಿದ್ದೀರೋ ಅಷ್ಟೇ ಪ್ರಮಾಣದ ಅಪರಾಧ

ಎಸಗಿದ್ದು, ಆ ಪ್ರಕಾರ ಕಲಂ.109 ಜೊತೆ 190 ರ ಭಾರತೀಯ ನ್ಯಾಯ ಸಂಹಿತೆ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರ.

10. ಹತ್ತನೇಯದಾಗಿ, ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವೆಲ್ಲರೂ ಅಕ್ರಮ ಗುಂಪು ಕಟ್ಟಿಕೊಂಡು ಬಂದು ದೊಂಬಿ ಮಾಡಿ, 2 ನೇ ಆರೋಪಿತನಾದ ನಿನ್ನ ಕುಮ್ಮಕ್ಕಿನ ಮೇರೆಗೆ ಸಾಕ್ಷಿ-1 ಮತ್ತು ಸಾಕ್ಷಿ-4 ರಿಂದ 18 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿದ್ದಲ್ಲದೇ, ಕೈಕಾಲುಗಳಿಂದ ಮೈಕೈಗೆ ಹೊಡೆದಿದ್ದಲ್ಲದೇ, ಆರೋಪಿತರಾದ ನೀವೆಲ್ಲರೂ ಸೇರಿಕೊಂಡು ಈ ಸೂಳೇ ಮಕ್ಕಳನ್ನು ಜೀವ ಸಹಿತ ಬಿಡಬಾರದು, ಇವರನ್ನು ಕೊಲೆ ಮಾಡಬೇಕೆಂದು ಕೊಲೆ ಬೆದರಿಕೆಯನ್ನು ಹಾಕಿದ್ದು, ಆರೋಪಿತರಾದ ನೀವು ಸಾಕ್ಷಿ-1 ಮತ್ತು ಸಾಕ್ಷಿ-4 ರಿಂದ 18 ರವರನ್ನು ಕುರಿತು ಕುಂದೂರು ಇತರೇ ಎಲ್ಲಿ ಸಿಕ್ಕರು ಇವರನ್ನು ಜೀವ ಸಹಿತ ಬಿಡಬಾರದೆಂದು ಜೀವ ಬೆದರಿಕೆಯನ್ನು ಹಾಕಿದ್ದು, ಆ ಪ್ರಕಾರ ಕಲಂ 351(3) ಜೊತೆ 190 ರ ಭಾರತೀಯ ನ್ಯಾಯ ಸಂಹಿತೆ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರ.

11. ಹನ್ನೊಂದನೇಯದಾಗಿ, ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವೆಲ್ಲರೂ ಅಕ್ರಮ ಗುಂಪು ಕಟ್ಟಿಕೊಂಡು ಬಂದು ದೊಂಬಿ ಮಾಡುವ ಪೂರ್ವದಲ್ಲಿ ಮೃತ ಶಿವರಾಜನನ್ನು ಕೊಲೆ ಮಾಡಬೇಕೆಂಬ ಉದ್ದೇಶದಿಂದ ದಿಃ 18-09-2024 ರ ಮದ್ಯಾಹ್ನ 1-00 ಗಂಟೆಗೆ 1 ನೇ ಆರೋಪಿಯಾದ ನಿನ್ನ ತಂದೆಗೆ ಸೇರಿದ ಚಿ.ಕಡದಕಟ್ಟೆ ಗ್ರಾಮದ ಸರ್ವೆ ನಂ.108 ರಲ್ಲಿ ಸಂಚು ನಡೆಸಿದ್ದು, ಆ ಪ್ರಕಾರ ಕಲಂ 61(2) ಹಾಗೂ 62 ಜೊತೆ 190 ರ ಭಾರತೀಯ ನ್ಯಾಯ ಸಂಹಿತೆ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರ.

12. ಹನ್ನೆರಡನೇಯದಾಗಿ, ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವೆಲ್ಲರೂ ಅಕ್ರಮ ಗುಂಪು ಕಟ್ಟಿಕೊಂಡು ಬಂದು ದೊಂಬಿ ಮಾಡಿದ್ದಲ್ಲದೇ, ಮೃತ ಶಿವರಾಜನನ್ನು ಕೊಲೆ ಮಾಡಬೇಕು ಎನ್ನುವ ಸಂಚಿನ ಮೇರೆಗೆ ನೀವೆಲ್ಲರೂ ಆತನ ಮನೆಯ ಬಳಿ ಬಂದು ಗಲಾಟೆ ಮಾಡಿ, ಆತನನ್ನು ಮನೆಯ ಒಳಗಡೆಯಿಂದ ಹೊರಗೆ ಎಳೆದು ತಂದು ನಿಮ್ಮಲ್ಲಿ 1 ನೇ ಆರೋಪಿಯಾದ ನೀನು ಶಿವರಾಜನನ್ನು ಬಿಗಿಯಾಗಿ ಹಿಡಿದುಕೊಂಡಿದ್ದು, 2 ನೇ ಆರೋಪಿಯಾದ ನೀನು ಶಿವರಾಜನಿಗೆ ಚಾಕುವಿನಿಂದ ಎದೆಯ ಎಡಭಾಗಕ್ಕೆ ಬಲವಾಗಿ ಚುಚ್ಚಿ ಕೊಲೆ ಮಾಡಿದ್ದು, ಆ ಪ್ರಕಾರ ಕಲಂ 103(1) ಜೊತೆ 190 ರ ಭಾರತೀಯ ನ್ಯಾಯ ಸಂಹಿತೆ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರ.

13. ಹದಿಮೂರನೇಯದಾಗಿ, ಆರೋಪಿತರಾದ ನಿಮಗೆ ಮೃತ ಶಿವರಾಜ ಮತ್ತು ಸಾಕ್ಷಿ-1 ರವರು ಪರಿಶಿಷ್ಟ ಜಾತಿಯ ಆದಿ ಕರ್ನಾಟಕ ಜನಾಂಗಕ್ಕೆ ಸೇರಿದವರು ಎಂದು ತಿಳಿದಿದ್ದರೂ ಕೂಡ ಹೇ ಶಿವರಾಜ ಮಾದಿಗ ಸೂಳೇಮಗನೇ ಎಲ್ಲಿದ್ದೀಯಾ ಬಾರೋ ನಿನ್ನ ತಾಯಿ ನಾ ಹಡ ಎಂದು ಅವಾಚ್ಯ ಶಬ್ದಗಳಿಂದ ಬೈದಾಡುತ್ತಾ ಇರುವಾಗ ಮೃತ ಶಿವರಾಜನ ಹೆಂಡತಿಯಾದ ಸಾಕ್ಷಿ-1 ರವರು ಮನೆಯಿಂದ ಹೊರಗೆ ಬರುತ್ತಿದ್ದಂತೆಯೇ 1 ಮತ್ತು 2 ನೇ ಆರೋಪಿತರಾದ ನೀವು ಮೃತ ಶಿವರಾಜನ ಮನೆಯ ಒಳಗೆ ಅಕ್ರಮ ಪ್ರವೇಶ ಮಾಡಿ ಮನೆಯೊಳಗಿದ್ದ ಮೃತ ಶಿವರಾಜನನ್ನು ಎಳೆದು ಹೊರಗೆ ತಂದಾಗ ಆರೋಪಿತರಾದ ನೀವೆಲ್ಲರೂ ಮೃತ ಶಿವರಾಜನಿಗೆ ಕೈಕಾಲುಗಳಿಂದ ಮೈಕೈಗೆ ಹೊಡೆಯುತ್ತಿರುವಾಗ ಬಿಡಿಸಿಕೊಳ್ಳಲು ಹೋದ ಸಾಕ್ಷಿ-1 ರವರಿಗೆ ಆರೋಪಿತರಾದ ನೀವೆಲ್ಲರೂ ಹೇ ಮಾದಿಗ ಸೂಳೆ ಮುಂಡೆ, ನಿನ್ನ ತಾಯಿ ನಾ ಹಡ, ಕತ್ತೆ ಸೂಳೆಮುಂಡೆ ಎಂದು ಜಾತಿ ನಿಂದನೆ ಮಾಡಿ ಅವಾಚ್ಯ ಶಬ್ದಗಳಿಂದ ಬೈದು, ಜಾತಿ ನಿಂದನೆ ಮಾಡಿದ್ದು, ಆ ಪ್ರಕಾರ ಕಲಂ 3(1)(ಆರ್), 3(1)(ಎಸ್) ಎಸ್‌ಸಿ ಎಸ್ ಟಿ (ಪಿಒಎ) ಕಾಯ್ದೆ 1989 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರ.

14. ಹದಿನಾಲ್ಕನೇಯದಾಗಿ, ಆರೋಪಿತರಾದ ನಿಮಗೆ ಸಾಕ್ಷಿ-1 ರವರು ಪರಿಶಿಷ್ಟ ಜಾತಿಯ ಆದಿ ಕರ್ನಾಟಕ ಜನಾಂಗಕ್ಕೆ ಸೇರಿದ ಮಹಿಳೆ ಎಂದು ತಿಳಿದಿದ್ದರೂ ಕೂಡ 1 ನೇ ಆರೋಪಿಯಾದ ನೀನು ಸಾಕ್ಷಿ-1 ರವರ ಮೈಮೇಲಿನ ಬಟ್ಟೆಯನ್ನು ಹಿಡಿದು ಎಳೆದಾಡಿ ಕೈಕಾಲುಗಳಿಂದ ಮೈಕೈಗೆ ಹೊಡೆದು ಒಳ ನೋವು ಉಂಟುಮಾಡಿ ಸಾರ್ವಜನಿಕ ಸ್ಥಳದಲ್ಲಿ ಅವಮಾನ ಮಾಡಿದ್ದು, ಆ ಪ್ರಕಾರ ಕಲಂ 3(1)(ಡಬ್ಲ್ಯೂ) ಎಸ್‌ಸಿ ಎಸ್ ಟಿ (ಪಿಒಎ) ಕಾಯ್ದೆ 1989 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರ.

15. ಕೊನೆಯದಾಗಿ, ಆರೋಪಿತರಾದ ನಿಮಗೆ ಮೃತ ಶಿವರಾಜ ಮತ್ತು ಸಾಕ್ಷಿ-1 ರವರು ಪರಿಶಿಷ್ಟ ಜಾತಿಯ ಆದಿ ಕರ್ನಾಟಕ ಜನಾಂಗಕ್ಕೆ ಸೇರಿದವರು ಎಂದು ತಿಳಿದಿದ್ದರೂ ಕೂಡ ಸಾರ್ವಜನಿಕವಾಗಿ ಮೃತ ಶಿವರಾಜನಿಗೆ ಮತ್ತು ಸಾಕ್ಷಿ-1 ರವರಿಗೆ ಜಾತಿ ನಿಂದನೆ ಮಾಡಿ, ಹಲ್ಲೆ ಮಾಡಿ, ಜೀವ ಬೆದರಿಕೆ ಹಾಕಿದ್ದು, ಸಾಕ್ಷಿ-1 ರವರ ಮಾನಕ್ಕೆ ಕುಂದು ಬರುವ ರೀತಿಯಲ್ಲಿ ವರ್ತಿಸಿದ್ದಲ್ಲದೇ, ಶಿವರಾಜನನ್ನು ಕೊಲೆ ಮಾಡಿದ್ದು ಹಾಗೂ ಸಾಕ್ಷಿ-13 ರವರಿಗೆ ಕೊಲೆ ಮಾಡುವ ಪ್ರಯತ್ನ ಮಾಡಿದ್ದು, ಆ ಪ್ರಕಾರ ಕಲಂ 3(2)(ವಿ-ಎ), 3(2)(ವಿ) ಎಸ್‌ಸಿ ಎಸ್ ಟಿ (ಪಿಒಎ) ಕಾಯ್ದೆ 1989 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರ.

16. ಇಂದು 07 ನೇ ತಾರೀಖು ನವಂಬರ್ ಮಾಹೆ 2025

( ಈ ಮೇಲಿನ ದೋಷಾರೋಪಣೆಯನ್ನು ಆರೋಪಿತನಿಗೆ ಓದಲು ತಿಳಿಸಿ,ಅವರ ಹೇಳಿಕೆಯನ್ನು ನನ್ನ ಸಮಕ್ಷಮ ತೆಗೆದುಕೊಳ್ಳಲಾಯಿತು.)

PRAVEEN KUMAR RAGHAV NAIK

Digitally signed by PRAVEEN KUMAR RAGHAV NAIK
Date: 2025.11.21 13:50:54 +0530

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಹಾಗೂ ವಿಶೇಷ ನ್ಯಾಯಾಧೀಶರು, ದಾವಣಗೆರೆ.

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಲಯ , ದಾವಣಗೆರೆ.

Spl.C.485/2024

| ಫಿರ್ಯಾದಿದಾರರು | ವಿರುದ್ಧ | ಆರೋಪಿತರು |
|---|---|---|
| ರಾಜ್ಯದ ಪರವಾಗಿ ನ್ಯಾಮತಿ ಪೊಲೀಸ್ ಠಾಣೆ, ನ್ಯಾಮತಿ | | ಎ1) ಸತೀಶ ಮತ್ತು ಇತರರು |

ಆರೋಪಿಯ ಹೇಳಿಕೆ

ಪ್ರಶ್ನೆ1 – ಈಗ ಓದಿ ಹೇಳಿದ ಆಪಾದನೆ ನಿಮಗೆ ತಿಳಿಯಿತೆ?

ಉತ್ತರ -

ಪ್ರಶ್ನೆ2 – ನೀನು ತಪ್ಪನ್ನು ಒಪ್ಪಿಕೊಳ್ಳುವಿಯೋ ಅಥವಾ ವಿಚಾರಣೆಯಾಗಬೇಕೆ?

ಉತ್ತರ -

(ಆರೋಪಿ ಹೇಳಿಕೆಯನ್ನು ಆತನ ಹೇಳಿಕೆ ಮೇರೆಗೆ ಮತ್ತು ನನ್ನ ಸಮಕ್ಷಮದಲ್ಲಿ ತೆಗೆದುಕೊಳ್ಳಲಾಯಿತು.)

PRAVEEN KUMAR RAGHAV NAIK

Digitally signed by PRAVEEN KUMAR RAGHAV NAIK
Date: 2025.11.21 13:51:14 +0530

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು

ದಿನಾಂಕ. 07-11-2025 ಹಾಗೂ ವಿಶೇಷ ನ್ಯಾಯಾಧೀಶರು, ದಾವಣಗೆರೆ.

| ಆರೋಪಿತರ ಹೆಸರು | ಆರೋಪಿತರ ಸಹಿ |
|---|---|
| ಎ1) ಸತೀಶ ತಂದೆ ಶೇಖರಪ್ಪ, ವಯಸ್ಸು 46 ವರ್ಷ, | |
| ಎ2) ಅಭಿ ಯಾನೆ ಅಭಿಶೇಕ್ ತಂದೆ ಸತೀಶ, ವಯಸ್ಸು 21 ವರ್ಷ, | |
| ಎ3) ರಘು ಯಾನೆ ರಾಘವೇಂದ್ರ ತಂದೆ ಪರಮೇಶ್ವರಪ್ಪ, ವಯಸ್ಸು 36 ವರ್ಷ, | |
| ಎ4) ಸೋಗಿಲು ಶೇಖರಪ್ಪ ಯಾನೆ ಶೇಖರಪ್ಪ ತಂದೆ ಲೇಟ್ ಬಸಪ್ಪ, ವಯಸ್ಸು 54 ವರ್ಷ, | |
| ಎ5) ಅಪ್ಪಾಜಿ ಯಾನೆ ಕೊರಮ ತಂದೆ ಬಸಪ್ಪ ಯಾನೆ ಬಸವರಾಜಪ್ಪ, ವಯಸ್ಸು 27 ವರ್ಷ, | |

ಎ6) ಸಂದೀಪ ತಂದೆ ಬಸವರಾಜಪ್ಪ, ವಯಸ್ಸು 23 ವರ್ಷ,

ಎ7) ಅನಿಲ ಎಸ್.ಎ. ತಂದೆ ಆಂಜಿನಪ್ಪ, ವಯಸ್ಸು 28 ವರ್ಷ,

ಎ9) ಪಾಲಾಕ್ಷಿ ಯಾನೆ ಪಾಲಾಕ್ಷಪ್ಪ ತಂದೆ ನಾಗಪ್ಪ, ವಯಸ್ಸು 36 ವರ್ಷ,

ಎ10) ಗಣೇಶ ತಂದೆ ರಂಗಪ್ಪ, ವಯಸ್ಸು 54 ವರ್ಷ,

ಎ11) ಸುದೀಪ್ ತಂದೆ ಚಂದ್ರಶೇಖರಪ್ಪ, ವಯಸ್ಸು 21 ವರ್ಷ,

ಎ12) ಸಚಿನ್ ತಂದೆ ಕುಮಾರಪ್ಪ, ವಯಸ್ಸು 22 ವರ್ಷ,

ಎ13) ಆಂಜನೇಯ ತಂದೆ ಶೇಖರಪ್ಪ, ವಯಸ್ಸು 26 ವರ್ಷ,